## ಕಳೆದ ಸಂಚಿಕೆಯಲ್ಲಿ



ಪತ್ನಿ ಹಾಗೂ ಮಗುವನ್ನು ಕಾಳಜಿ ಮಾಡಲು ಮಹಿಳೆಯೊಬ್ಬಳನ್ನು ಕರೆದುಕೊಂಡು ಬಂದ ಪ್ರದೀಪನ ಮೇಲೆ ನಿವೇದಿತಾ ಸಿಟ್ಟಾದಳು. ಬೆಡ್‌ರೂಂ ಹಾಗೂ ಹಾಲ್‌ನಲ್ಲಿ ಸಿಸಿಟಿವಿಗಳನ್ನು ಅಳವಡಿಸಿದ್ದು ತಿಳಿದು ಮತ್ತಷ್ಟು ವ್ಯಗ್ರಗೊಂಡಳು. ತನ್ನ ಖಾಸಗಿತನವನ್ನು ಗಂಡ ಅವಮಾನಿಸುತ್ತಿದ್ದಾನೆಂದು ತಿಳಿದು ಕೋಪಗೊಂಡಳು. ಮಗುವಿನೊಂದಿಗೆ ಬಚ್ಚಲಿನಲ್ಲಿ ಸೇರಿಕೊಂಡ ಪತ್ನಿಯನ್ನು ಹೊರಗೆ ಬರುವಂತೆ ಮಾಡುವ ವೇಳೆಗೆ ಪ್ರದೀಪನಿಗೆ ಸಾಕುಸಾಕಾಯಿತು. ತನ್ನ ಮೇಲಿನ ಅನುಮಾನದಿಂದ ಪ್ರದೀಪ ಹೀಗೆಲ್ಲ ಮಾಡುತ್ತಿದ್ದಾನೆಂದು ತಿಳಿದು ನಿವೇದಿತಾ ಕಟುವಾಗಿ ಮಾತನಾಡಿದಳು. ಪೊಲೀಸ್ ದೂರು ಕೊಟ್ಟರೆ ಪರಿಸ್ಥಿತಿ ಬಿಗಡಾಯಿಸಬಹುದೆಂದು ಎಚ್ಚರಿಸಿದಳು. ಒತ್ತಡಕ್ಕೆ ಸಿಲುಕಿದ ಪ್ರದೀಪ, ತನ್ನ ನಡವಳಿಕೆಯ ಹಿಂದಿನ ಕಾರಣವನ್ನು ಹೆಂಡತಿಗೆ ತಿಳಿಸಿದ. ಆದರೆ, ತನ್ನ ಮಗುವನ್ನು ತಾನೇ ಕೊಲ್ಲಲು ಪ್ರಯತ್ನಿಸಿದ ಆರೋಪವನ್ನು ಒಪ್ಪಿಕೊಳ್ಳಲು ನಿವೇದಿತಾಳ ಮನಸ್ಸು ನಿರಾಕರಿಸಿತು. ಈ ಜಿಜ್ಞಾಸೆಯಿಂದ ಹೊರಬರಲು ಯೋಚಿಸತೊಡಗಿದ ಅವಳಿಗೆ ಹೊಳೆದಿದ್ದು ಕೌನ್ಸೆಲಿಂಗ್! ಗೆಳತಿಯ ಸಹಾಯ ಪಡೆದು ಮಾನಸಿಕ ತಜ್ಞರನ್ನು ಸಂಪರ್ಕಿಸಲು ನಿವೇದಿತಾ ನಿರ್ಧರಿಸಿದಳು.

ಪ್ರಶ್ನಾರ್ಥಕವಾಗಿ ದಿಟ್ಟಿಸಿದರು. ಅವರಿಗೂ ಕುತೂಹಲ ಮೂಡಿತ್ತು. 'ಏನದು?'

'ನನ್ನ ಒಂದು ವರ್ಷದ ಮಗು ನಿಧಿಯನ್ನು ನಾನೇ ಕೊಲ್ಲಲು ಯತ್ನಿಸಿದೆನಂತೆ. ಅದನ್ನು ಇವರು ನೋಡಿದ್ದಾರಂತೆ' ಎಂದು ಬಿಕ್ಕಳಿಸಲು ಶುರು ಮಾಡಿದಳು.

ಅಧ್ಯಾಯ 6

ಅದುವರೆಗೂ ತಾಳ್ಮೆಯಿಂದ ಎಲ್ಲವನ್ನೂ ಆಲಿಸುತ್ತಿದ್ದ ಪ್ರದೀಪ ಈಗ ಬಾಯಿ ತೆರೆದು, 'ಇದು ಸತ್ಯ. ನಾನು ಕಣ್ಣಾರೆ ನೋಡಿದ ಸತ್ಯ' ಎಂದ.

'ನೋಡಿದ್ರಾ, ಹೆತ್ತ ತಾಯಿಯಾಗಿ ನಾನೇ ನನ್ನ ಮಗುವನ್ನು ಕೊಲ್ತೀನಾ? ಅರ್ಥವಿದೆಯೇ ಈ ಮಾತಿಗೆ? ನನ್ನಿಂದ ದೂರವಾಗಲು ಇಲ್ಲದ ಆರೋಪಗಳನ್ನು ಹೊರಿಸಿ ನನ್ನಿಂದ ದೂರವಾಗುವ ಸಿದ್ದತೆ ಮಾಡುತ್ತಿದ್ದಾರಷ್ಟೇ' ನಿವಿ ಕಂಬನಿ ಹರಿಸುತ್ತಾ ನುಡಿದಳು.

'ನಿವೇದಿತಾ ಸಮಾಧಾನ ಮಾಡಿಕೊಳ್ಳಿ ಪ್ಲೀಸ್. ನಿಮಗೆ ಇನ್ನೇನಾದರೂ ಹೇಳುವುದಿದೆಯೇ? ಅವರ ಸರದಿ ಬಂದಾಗ ನೀವು ನಡುವೆ ಮಾತನಾಡಬಾರದು. ಬರೀ ಆಲಿಸಬೇಕು. ಆಗಬಹುದೇ?' ಡಾ. ರೂಪಾ ನಿವಿಯ ಕಡೆಗೆ ನೋಡುತ್ತ ನುಡಿದಾಗ ಆಕೆ ತನ್ನನ್ನೇ ತಾನು ಸಂತೈಸಿಕೊಳ್ಳುವ ಯತ್ನ ಮಾಡುತ್ತ, 'ನನ್ಗೆ ಗೊತ್ತಿಲ್ಲ. ಅವರಿಗೆ ನನ್ನ ಬಗ್ಗೆ ಏನೆಲ್ಲಾ ಆಕ್ಷೇಪಣೆಗಳಿವೆ ಎಂದು, ಅದನ್ನೂ ಕೇಳೋಣ ಬಿಡಿ' ಎಂದಳು.

ಡಾ. ರೂಪಾ ಈಗ ಪ್ರದೀಪನಿಗೆ ಮಾತನಾಡಲು ಅವಕಾಶ ನೀಡಿದರು. 'ನಿಮ್ಮ ವರ್ಶನ್ ಹೇಳಿ ಪ್ರದೀಪ್'

'ಮೇಡಮ್, ನನ್ಗೆ ನನ್ನ ಜೀವನದಲ್ಲಿ ಹಿಂದೆ ಮುಂದೆ ಯಾರೂ ಇಲ್ಲ. ಸೆಲ್ಫ್ ಮೇಡ್ ಮ್ಯಾನ್ ನಾನು. ಈ ಹಂತಕ್ಕೆ ತುಂಬಾ ಕಷ್ಟಪಟ್ಟು ಮೇಲೆ ಬಂದಿದ್ದೀನಿ. ಗ್ರಾನೈಟ್ ಇಂಪೋರ್ಟ್ ಅಂಡ್ ಎಕ್ಸ್‌ಪೋರ್ಟ್ ಬಿಸಿನೆಸ್ ನನ್ನದು. ಅದು ಚೆನ್ನಾಗೇ ನಡೀತಿದೆ. ನಿಮ್ಗೇ ಗೊತ್ತಿದೆ. ಬಿಸಿನೆಸ್ ಅಂತ ಇಳಿದ ಮೇಲೆ ಇಡೀ ದಿನ ಮನೇಲಿರಲು ಸಾಧ್ಯವಿಲ್ಲ. ನಾನು ತುಂಬಾ ಇಷ್ಟಪಟ್ಟು ನಿವೀನ್ನ ನಾನೇ ಕೇಳಿ ಮದುವೆ ಮಾಡಿಕೊಂಡೆ. ನಮ್ಮ ಜೀವನ ಚೆನ್ನಾಗಿಯೇ ನಡೀತಿತ್ತು. ಮಗಳೂ ಹುಟ್ಟಿದಳು. ನನಗೆ ಹೆಣ್ಣುಮಗುವೇ ಆಸೆ ಇತ್ತು. ಭಗವಂತ ನನಗೆ ನಾನು ಆಸೆಪಟ್ಟಿದ್ದು ಎಲ್ಲಾ ಕೊಟ್ಟಿದ್ದಾನೆ. ಒಂದು ದಿನ ನಾನು ಮನೆಗೆ ಹಿಂತಿರುಗಿದಾಗ ನಿವೀ ನನ್ನ ಒಂದು ವರ್ಷದ ಕಂದನ ಮೂಗು ಒತ್ತಿ ಹಿಡಿದು ಕೊಲೆ ಮಾಡುವ ಯತ್ನ ನಡೆಸುತ್ತಿದ್ದಳು. ನಾನು ಸಮಯಕ್ಕೆ ಸರಿಯಾಗಿ ಬಂದು ಮಗುವನ್ನು ಕಿತ್ತುಕೊಳ್ಳದಿದ್ದರೆ ನಿಧಿಯನ್ನು ಕಳೆದುಕೊಳ್ಳುತ್ತಿದ್ದೆವು. ಆನಂತರ ನನಗೆ ಮಗಳನ್ನು ಇವಳ ಜೊತೆ ಬಿಡಲು ಭಯ ಶುರುವಾಯಿತು. ಈಕೆ ನೋಡಿದರೆ ತಾನು ಆ ಕೃತ್ಯ ಮಾಡೇ ಇಲ್ಲವೆಂದು ಹೇಳುತ್ತಾಳೆ. ಈಕೆ ಪ್ರಜ್ಞಾಪೂರ್ವಕವಾಗಿ ಮಾಡಿದಳೋ ಅಥವಾ ಪರಿವೆಯಿಲ್ಲದೇ ಮಾಡಿದಳೋ ನನಗೆ ಗೊತ್ತಿಲ್ಲ. ಆನಂತರ ಇವಳ ಹೆತ್ತವರನ್ನು ಕರೆಸಿ ಮನೆಗೆ ಕಳಿಸಿಕೊಟ್ಟೆ. ಕಾರಣ ನಾನು ಇಲ್ಲಿ ಮನೇಲಿರಲ್ಲ. ಅಲ್ಲಿ ಅವಳ ಹೆತ್ತವರು ಕಾವಲಿರುತ್ತಾರೆ ಎಂದು ಅವರಿಗೆ ಎಲ್ಲವನ್ನೂ ತಿಳಿಸಿಯೇ ಕಳಿಸಿದೆ. ಅಲ್ಲಿ ನೋಡಿದರೆ' ಎಂದು ಮಗು ಮಂಚದಡಿ ಟಬ್‌ನಲ್ಲಿ ದೊರೆತ ಸಂಗತಿಯನ್ನು ವಿವರಿಸಿದ.

'ಈ ಕಾರಣಕ್ಕೆ ನಾನು ಮನೆಯಲ್ಲಿ ಸಹಾಯಕಿಯನ್ನು ನೇಮಿಸಿದೆ. ಸಿಸಿಟೀವಿ ಅಳವಡಿಸಿದೆ' ಎಂದು ತನ್ನ ಸಮರ್ಥನೆಯನ್ನು ನೀಡಿದ.

ಡಾ. ರೂಪಾ ತಕ್ಕಡಿಯ ಎರಡೂ ತಟ್ಟೆಗಳಲ್ಲಿ ತಂತಮ್ಮ ನಿಲುವುಗಳನ್ನು ಸುರಿದಿದ್ದರು. ಇಬ್ಬರ ಮನದಲ್ಲಿದ್ದುದ್ದೆಲ್ಲವೂ ಹೊರಗೆ ಸುರಿದುದ್ದಾಗಿತ್ತು. ಇಬ್ಬರೂ ಡಾ. ರೂಪಾ ಅವರ ಮುಖ ದಿಟ್ಟಿಸುತ್ತಾ ಅವರ ಮಾತಿಗೆ ಎದುರು ನೋಡುತ್ತಾ ಕುಳಿತರು.

ಅದುವರೆಗೂ ಎಲ್ಲವನ್ನೂ ಆಲಿಸಿದ ಡಾ. ರೂಪಾ ಈಗ ಕುರ್ಚಿಗೊರಗಿ ಕುಳಿತು ಮನಸ್ಸನ್ನು ವಿಶ್ಲೇಷಣೆಗೆ ಒಳಪಡಿಸಿದಂತೆ ಮೌನವಾಗಿ ಇಬ್ಬರೆಡೆಗೆ ನೋಡುತ್ತಾ ಕುಳಿತರು. ಇಬ್ಬರ ಮುಖದ ಭಾವನೆಗಳನ್ನು ಅಳೆಯುವಂತಿತ್ತು ಅವರ ನೋಟ.

'ನೀವಿಬ್ರೂ ಜೊತೆಗೆ ಹೊರಗೆ ಸುತ್ತಾಡಲು ಹೋಗುತ್ತೀರಾ? ವೀಕೆಂಡ್ ಅಥವಾ ಸಮಯ ದೊರೆತಾಗ?'

'ನನ್ಗೇನೋ ಆಸೆ. ಆದರೆ ನಿವಿ ಹೆಚ್ಚಾಗಿ ಔಟಿಂಗ್ ಇಷ್ಟಪಡಲ್ಲ. ನಾನು ಕರೀತೀನಿ, ಆಕೆ ಬರಲ್ಲ' ಪ್ರದೀಪ ನುಡಿದ.

'ಹೌದಾ ನಿವೇದಿತಾ? ನಿಮಗೆ ತಿರುಗಾಟ ಇಷ್ಟವಿಲ್ಲವಾ?'

'ಹಾಗೇನಿಲ್ಲ ಮೇಡಮ್, ಆದರೆ ಮಗು ಚಿಕ್ಕದು. ಹ್ಯಾಂಡಲ್ ಮಾಡೋದು ಕಷ್ಟ. ಅಲ್ಲದೆ ಮಗು ಫೀಡಿಂಗ್‌ನಲ್ಲಿರುವ ಕಾರಣ, ನಾನೇನಾದರೂ ತಿಂದು ಅದಕ್ಕೆ ತೊಂದರೆಯಾದರೆ ಅಂತ'.

'ಮಗು ಹುಟ್ಟುವ ಮುಂಚೆ ತಿರುಗಾಟ?'

'ಆಗಲೂ ಆಕೆಗೆ ಇಷ್ಟವಿರುತ್ತಿರಲಿಲ್ಲ. ನಾನೇ ಒತ್ತಾಯಕ್ಕೆ ಜೈಪುರ, ರಾಜಸ್ಥಾನಕ್ಕೆ ಕರೆದೊಯ್ದಿದ್ದೆ. ಆಕೆಗೆ ಅಂಥ ಆಸಕ್ತಿ ಇರುವುದಿಲ್ಲ. ಶೀ ಈಸ್ ಹೋಮ್ಲಿ ಪರ್ಸನ್ ಮೇಡಮ್'.

'ಸರಿ. ನಾನು ಸ್ವಲ್ಪ ಕ್ವಶ್ಚನೇರ್ ತಯಾರು ಮಾಡ್ತೀನಿ. ಇಬ್ಬರೂ ಅದಕ್ಕೆ ಉತ್ತರಿಸಬೇಕು. ನಿಮ್ಮಿಬ್ಬರ ನಡುವೆ ಕಂಪಾಟಿಬಿಲಿಟಿ, ಅಂದರೆ ಹೊಂದಾಣಿಕೆ ಹೇಗಿದೆ ಅಂತ ನೋಡಲು. ಸ್ವಲ್ಪ ವೇಯ್ಟ್ ಮಾಡಿ'.

ಡಾ. ರೂಪಾ ಸಮಯ ತೆಗೆದುಕೊಂಡು ತಮ್ಮ ಲ್ಯಾಪ್ ಟಾಪ್‌ನಲ್ಲಿ ಸಿದ್ಧವಿದ್ದ ಪ್ರಶ್ನಾವಳಿಯಲ್ಲಿ ಸ್ವಲ್ಪ ಮಾರ್ಪಾಟು ಮಾಡಿಕೊಂಡು ತಮಗೆ ಅನುಮಾನವಿದ್ದ ಸಂಗತಿಗಳನ್ನು ಬಗೆಹರಿಸಿಕೊಳ್ಳಲು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಸೇರಿಸಿ ಪ್ರಿಂಟ್ ತೆಗೆದು ದಂಪತಿಯನ್ನು ಕರೆಸಿಕೊಂಡರು.

ಎರಡು ಪ್ರಿಂಟ್‌ಗಳನ್ನು ನೀಡಿ ಇಬ್ಬರಿಗೂ ಪ್ರತ್ಯೇಕವಾಗಿ ಕುಳ್ಳಿರಿಸಿ, 'ಇದರಲ್ಲಿರುವ ಪ್ರಶ್ನೆಗಳಿಗೆ ಹೌದು ಅಥವಾ ಇಲ್ಲ ಅಥವಾ ಅದಕ್ಕೆ ಇನ್ನೂ ಮುಂದುವರೆದು ಹೇಳುವುದಿದ್ದರೂ ದಾಖಲಿಸಬಹುದು. ಇಬ್ಬರೂ ಒಬ್ಬರಿಗೊಬ್ಬರು ಇದರ ಕುರಿತು ಪ್ರಶ್ನಿಸುವಂತಿಲ್ಲ. ಅದಕ್ಕೇ ಬೇರೆ ಬೇರೆ ಕುಳ್ಳಿರಿಸಿ ಬರೆಸ್ತಾ ಇದೀನಿ' ಎಂದು ಹಾಳೆಗಳನ್ನು ನೀಡಿದರು. ಎರಡು ವಿರುದ್ಧ ದಿಕ್ಕಿನಲ್ಲಿದ್ದ ಕುರ್ಚಿಗಳಲ್ಲಿ ಕುಳಿತು ತಮಗೆ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸತೊಡಗಿದರು.

ಇಬ್ಬರ ಹಾವಭಾವಗಳನ್ನು ಅವರು ಕುಳಿತಲ್ಲಿಂದಲ್ಲೇ ಅವಲೋಕಿಸುತ್ತಿದ್ದರು. ಪ್ರದೀಪ ನೇರವಾಗಿ ಕುಳಿತು ತಲೆತಗ್ಗಿಸಿ ಗಂಭೀರವಾಗಿ ಓದುತ್ತಿದ್ದ, ನಿವೇದಿತಾಳಿಗೆ ಪ್ರದೀಪ ಏನು ಬರೆಯುತ್ತಾನೆಂಬ ಸಹಜ ಕುತೂಹಲವಿತ್ತು. ಕೆಲವು ಬಾರಿ ಬಾರಿಗೆ ಅವನೆಡೆಗೆ ನೋಡಿ ತನ್ನದಕ್ಕೆ ಉತ್ತರಿಸುತ್ತಿದ್ದಳು. ಡಾ. ರೂಪಾ ಅವರಿಬ್ಬರು ಮಂಡಿಸಿದ ವಿಷಯಗಳ ಕುರಿತು ತಾವು ಗಮನಿಸಿದ ಪ್ರಮುಖವಾದ ಮತ್ತು ಪ್ರಾಥಮಿಕ ವಿಷಯಗಳನ್ನು ಗುರುತು ಹಾಕಿಕೊಳ್ಳತೊಡಗಿದರು.